ಬೆವಿಕಂ
BESCOM

**ಕಾರ್ಯನಿರ್ವಾಹಕ ಅಭಿಯಂತರರು (ವಿ.)ರವರ ಕಛೇರಿ**

**OFFICE OF THE EXECUTIVE ENGINEER (Ele.)**

**ಸಂಖ್ಯೆ/No.: ಕಾನಿಇಂ/ಸಕಾನಿಇಂ(ಕ)/ತಾಸ-4/2025-26/** 9694-95 **ದಿನಾಂಕ/Date:** 12 DEC 2025

**ಲಗತ್ತು/Enclose:**

**ರವರಿಗೆ,**

**ಶ್ರೀ ಎಚ್.ಸಿ ಉನ್ನತಿ ಫಾರ್ಮ್ ಎಲ್.ಎಲ್.ಪಿ**
**ಮತ್ತು ಮೆ॥ ಹೊಸಚಿಗುರು ಫಾರ್ಮ್,**
**ಸರ್ವೆನಂ. 4/1, 4/2, 4/3, 4/4, 4/5, 4/6, 5/1,**
**5/2, 5/3, 5/4, 5/4, 5/6, 5/7, 5/8 & 5/9**
**ಗಡ್ಡಂನಾಗದಿನ್ನೆ ಗ್ರಾಮ, ಸೋಮೇನಹಳ್ಳಿ ಹೋಬಳಿ,**
**ಗುಡಿಬಂಡೆ ತಾಲ್ಲೂಕು.**

**ಮಾನ್ಯರೇ,**

**ವಿಷಯ: ಗುಡಿಬಂಡೆ ತಾಲ್ಲೂಕು, ಸೋಮೇನಹಳ್ಳಿ ಹೋಬಳಿ, ಗಡ್ಡಂನಾಗದಿನ್ನೆ ಗ್ರಾಮದ, ಸ.ನಂ.4/1, 4/2, 4/3, 4/4, 4/5, 4/6, 5/1, 5/2, 5/3, 5/4, 5/4, 5/6, 5/7, 5/8 & 5/9 ರ 49 ಎಕರೆ 32 ಗುಂಟೆ ವಿಸ್ತೀರ್ಣದಲ್ಲಿ ಶ್ರೀ ಎಚ್.ಸಿ ಉನ್ನತಿ ಫಾರ್ಮ್ ಎಲ್. ಎಲ್.ಪಿ ಮತ್ತು ಮೆ॥ ಹೊಸಚಿಗುರು ಫಾರ್ಮ್ ರವರ ವಸತಿ ಗೃಹಗಳ ಬಡಾವಣೆ ನಿರ್ಮಾಣಕ್ಕಾಗಿ 49 ಕಿ.ವ್ಯಾ ಹೊರೆಯ ವಿದ್ಯುತ್ ಸಂಪರ್ಕವನ್ನು ಕೆ.ಇ.ಆರ್.ಸಿ ಷರತ್ತು 12.01 ರನ್ವಯ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಸ್ವಯಂ ನಿರ್ವಹಣಾ ಕಾಮಗಾರಿ ಅಡಿಯಲ್ಲಿ ಮಂಜೂರು ಮಾಡುವ ಬಗ್ಗೆ.**

ಉಲ್ಲೇಖ: ಸಕಾನಿ(ವಿ)/ಸಇ(ತಾ)/ಗುಡಿ/2025-26/1129/ 02.12.2025.

>>>><<<<

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಮ್ಮ ಮನವಿಯಲ್ಲಿ ನೀವು ಕೋರಿರುವಂತೆ ಗುಡಿಬಂಡೆ ತಾಲ್ಲೂಕು, ಸೋಮೇನಹಳ್ಳಿ ಹೋಬಳಿ, ಗಡ್ಡಂನಾಗದಿನ್ನೆ ಗ್ರಾಮದ, ಸ.ನಂ.4/1, 4/2, 4/3, 4/4, 4/5, 4/6, 5/1, 5/2, 5/3, 5/4, 5/4, 5/6, 5/7, 5/8 & 5/9 ರ 49 ಎಕರೆ 32 ಗುಂಟೆ ವಿಸ್ತೀರ್ಣದಲ್ಲಿ ಶ್ರೀ ಎಚ್.ಸಿ ಉನ್ನತಿ ಫಾರ್ಮ್ ಎಲ್. ಎಲ್.ಪಿ ಮತ್ತು ಮೆ॥ ಹೊಸಚಿಗುರು ಫಾರ್ಮ್ ರವರ ವಸತಿ ಗೃಹಗಳ ಬಡಾವಣೆ ನಿರ್ಮಾಣಕ್ಕಾಗಿ 49 ಕಿ.ವ್ಯಾ ಹೊರೆಯ ವಿದ್ಯುತ್ ಸಂಪರ್ಕವನ್ನು 61 ದಿವಸಗಳಿಗೆ ಸ್ವಯಂ ಕಾರ್ಯ ಕಾಮಗಾರಿ ಅಡಿಯಲ್ಲಿ ಈ ಕೆಳಗೆ ಸೂಚಿಸಿರುವ ಷರತ್ತುಗಳ ಮೇರೆಗೆ ಮಂಜೂರು ಮಾಡಲಾಗಿದೆ.

1. ಚಾಲ್ತಿಯಲ್ಲಿರುವ ಎಲ್.ಟಿ.-7 ಜಕಾತಿಯು ನಿಮ್ಮ ಸ್ಥಾವರಕ್ಕೆ ಅನ್ವಯಿಸಲ್ಪಡುತ್ತದೆ.
2. ಈ ಕೆಳಕಂಡ ಮೊತ್ತವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಬೆವಿಕಂ. ಗುಡಿಬಂಡೆ ಉಪ ವಿಭಾಗ ರವರ ಹೆಸರಿನಲ್ಲಿ ಡಿಡಿ ಮುಖಾಂತರ ಈ ಪತ್ರದ ದಿನಾಂಕದಿಂದ 90 ದಿನಗೊಳಗಾಗಿ ಪಾವತಿಸಬೇಕು.

| ತೇವಣಿ ವಿವರಗಳು (ಲೆಕ್ಕ ಶೀರ್ಷಿಕೆ) | ತೇವಣಿಯ ಮೊತ್ತ | ರೂ ಅಕ್ಷರಗಳಲ್ಲಿ |
|---|---|---|
| ಮುಂಗಡ ವಿದ್ಯುತ್ ಬಳಕೆ ಠೇವಣಿ ಬಾಬ್ತು (ACC) | 4,50,800.00 | ರೂ. ನಾಲ್ಕು ಲಕ್ಷ ಐವತ್ತು ಸಾವಿರದ ಎಂಟುನೂರು ಮಾತ್ರ |
| 5% ಮೇಲ್ವಿಚಾರಣಾ ಶುಲ್ಕ | 23,350.00 | ರೂ. ಇಪ್ಪತ್ತು ಮೂರು ಸಾವಿರದ ಮೂರು ನೂರ ಐವತ್ತುಮಾತ್ರ |
| ಸಮಾಗ್ರಿಗಳ ತಪಾಸಣ ಶುಲ್ಕ | 5,000.00 | ರೂ. ಐದು ಸಾವಿರ ಮಾತ್ರ |
| **ಒಟ್ಟು** | **4,79,150.00** | |

3. ಕಾಮಗಾರಿಗಳನ್ನು ಕರ್ನಾಟಕ ರಾಜ್ಯದ ಅನುಮತಿ ಪಡೆದ ಪ್ರಥಮ ದರ್ಜೆ ಗುತ್ತಿಗೆದಾರರ ಮುಖೇನ ಬೆವಿಕಂ ನ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಿರ್ವಹಿಸುವುದು.

...2

4. ಪರಿವರ್ತಕಗಳು, ವಾಹಕಗಳು, ಮೀಟರಿಂಗ್ ಕ್ಯುಬಿಕಲ್, ಭೂಗತ ಕೇಬಲ್ ಮುಂತಾದ ಸಾಮಾಗ್ರಿಗಳು IE/BESCOM ಮಾನದಂಡಗಳ ಪ್ರಕಾರ ಇರಬೇಕು ಮತ್ತು ಎಲ್ಲಾ ಸಾಮಾಗ್ರಿಗಳ ಗುಣಮಟ್ಟವನ್ನು ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಖರೀದಿ ಮಾಡುವ ಮೊದಲೇ ಪರಿಶೀಲಿಸಬೇಕು.
5. ಬೆವಿಕಂ ಅನುಮೋದನೆ ಪಡೆದ ಮಾರಾಟದಾರರಿಂದ (approved vendor) ಸಾಮಾಗ್ರಿಗಳ ಖರೀದಿ ಮಾಡಿರುವುದಕ್ಕೆ ದಾಖಲಾತಿಗಾಗಿ ಬಿಲ್ಲುಗಳನ್ನು / invoices ಗಳನ್ನು ಸಲ್ಲಿಸಬೇಕು. ನಿಗಮ ಕಛೇರಿಯ ಸುತ್ತೋಲೆ ಸಂಖ್ಯೆ BESCOM/BC-9/CGM (CA)/DGM (CA-3)/F-752/13-14/CYS-113 dated 29.8.2013 ಪ್ರಕಾರ ಅರ್ಜಿದಾರರು ಪಾಲಿಮರ್ ವಿದ್ಯುತ್ ನಿರೋಧಕವನ್ನು ಮಾತ್ರ ಬಳಸಬೇಕು.
6. ಸ್ವಯಂ ಕಾರ್ಯನಿರ್ವಹಣಾ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಕರಾರು ಪತ್ರವನ್ನು 200.00 ರೂಪಾಯಿ ಛಾಪಾ ಕಾಗದದಲ್ಲಿ ಸಲ್ಲಿಸುವುದು.
7. ನಿಗಮದಿಂದ ಅನುಮೋದಿಸಲ್ಪಟ್ಟ ತಯಾರಿಕೆಯ ಸೂಕ್ತ ಸಾಮರ್ಥ್ಯದ ವಿದ್ಯುತ್ ಪರಿವರ್ತಕವನ್ನು IS 1180-2014 ಅನುಗುಣವಾಗಿರಬೇಕು ಹಾಗು ಗರಿಷ್ಟ ನಷ್ಟದ 50% & 100% ಹೊರೆಯ ವಿದ್ಯುತ್ ಸಾಮರ್ಥ್ಯದ ಹಂತ-1 ರ ನಿರ್ದಿಷ್ಟ ನಷ್ಟದ IS 1180-2014 ನಿಗದಿತ ಮಿತಿಗಿಂತ ಹೆಚ್ಚಾಗಬಾರದು ಮತ್ತು ಪರಿವರ್ತಕವನ್ನು ಸ್ವಯಂ-ಕಾಮಗಾರಿ ಮೂಲಕ ಇದಕ್ಕಾಗಿ ತಯಾರಿಸುವ ಅಂದಾಜು ಪಟ್ಟಿಯ ಪ್ರಕಾರ ಅಳವಡಿಸುವುದು. BESCOM/BC-2/DT/GM (QS&S)/2014-15/CYS-75/03.01.2015.
8. ಮುಂದೆ ಆಗುವ ಯಾವುದೇ ಭಾದ್ಯತೆಗಳಿಗೆ ಬೆವಿಕಂ ಜವಾಬ್ದಾರಿಯಾಗಿರುವುದಿಲ್ಲ.
9. ಹಣ ಪಾವತಿ ಮಾಡಿರುವ ದೃಢೀಕರಣದ ಪತ್ರವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಗುಡಿಬಂಡೆ ಉಪ ವಿಭಾಗದವರು, ಆಡಳಿತ ಅನುಮೋದನೆ ನೀಡಲು ಈ ಕಛೇರಿಗೆ ಕಳುಹಿಸಿ ಕೊಡಬೇಕು.
10. ನಿಗಮದಿಂದ ಅನುಮೋದಿಸ್ಪಟ್ಟ ಸೂಕ್ತ ಸಾಮರ್ಥ್ಯದ ಸರ್ಕ್ಯೂಟ್ ಬ್ರೇಕರ್ ಮತ್ತು ಇ.ಎಲ್.ಸಿ.ಬಿ ಯನ್ನು ಮಾಪಕ ಪೆಟ್ಟಿಗೆಯಿಂದ ಒಂದು ಮೀಟರ್ ಒಳಗೆ ಮತ್ತು ಭೂಮಿಯಿಂದ 0.6 X 1.6 ಮೀ ಎತ್ತರದ ಒಳಗೆ ನೆಲ ಮಾಳಿಗೆಯಲ್ಲಿ ಅಳವಡಿಸುವುದು.
11. ಭವಿಷ್ಯದಲ್ಲಿ ಬೆ.ವಿ.ಕಂ ನ ದರಪಟ್ಟಿ ಪರಿಷ್ಕೃತಗೊಂಡಲ್ಲಿ ಅಥವಾ ಕಾಮಗಾರಿ ನಿರ್ವಹಿಸುವಾಗ ಅಂದಾಜು ಪಟ್ಟಿಯು ಪರಿಷ್ಕೃತವಾದಾಗ ವ್ಯತ್ಯಾಸದ ಮೊತ್ತವನ್ನು ಕೂಡಲೇ ಅದನ್ನು ಬೆವಿಕಂ / ಕವಿಪ್ರನಿನಿಗೆ ಪಾವತಿಸಬೇಕು.

ತಮ್ಮ ವಿಶ್ವಾಸಿ

(ಪಿ.ಜಿ.ರಮೇಶ್ ಕುಮಾರ್)
ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಬೆ.ವಿ.ಕಂ, ಚಿಕ್ಕಬಳ್ಳಾಪುರ ವಿಭಾಗ.

ಪ್ರತಿಯನ್ನು :

- ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆ.ವಿ.ಕಂ, ಗುಡಿಬಂಡೆ ಉಪ ವಿಭಾಗ ರವರ ಮಾಹಿತಿಗಾಗಿ.
- ತಾ.ಸ-4, ತಾಂತ್ರಿಕ ಶಾಖೆ, ಬೆವಿಕಂ, ಚಿಕ್ಕಬಳ್ಳಾಪುರ